REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)


ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ


ಸಂಪುಟ : 32 । ಸಂಚಿಕೆ : 40 । 7 ಜನವರಿ 2026 । ಬುಧವಾರ । ಪುಟಗಳು : 8 । ಬೆಲೆ : 2/-

## ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು

**ಬೆಂಗಳೂರು:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಕೆ.ಎಚ್. ರಸ್ತೆ, ಬೆಂಗಳೂರು – 27 ಈ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಗಳಿಗೆ ಮುಂದಿನ ಐದು ವರ್ಷಗಳ ಅವಧಿಗೆ ಈ ಕೆಳಕಂಡ 17 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಒಂದು ಸ್ಥಾನಕ್ಕೆ ಚುನಾವಣೆ ನಡೆದು ಶ್ರೀ ಆನಂದಗೌಡ ಎನ್. ಬಿರಾದಾರ ಅವರು ಆಯ್ಕೆಯಾಗಿರುತ್ತಾರೆ.


ಶ್ರೀ ಎಚ್.ಕೆ. ಪಾಟೀಲ


ಶ್ರೀ ಬಿ.ಎಸ್. ಪರಮಶಿವಯ್ಯ


ಶ್ರೀ ದೇವಗೌಡಾ ತಮ್ಮನಗೌಡಾ ಪಾಟೀಲ


ಶ್ರೀ ಅಶೋಕ ಮಲ್ಲಪ್ಪ ಮನಗೂಳಿ


ಶ್ರೀ ಮಲಕಣ್ಣ ಡಿ. ಪಾಟೀಲ


ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ


ಶ್ರೀ ರಮೇಶ್ ಬಾಬು


ಶ್ರೀ ಎಸ್.ಬಿ.ಎಂ. ಮಂಜು


ಶ್ರೀ ಎಸ್.ಪಿ. ಶೇಷಾದ್ರಿ


ಶ್ರೀ ಎಂ.ಕೆ. ಪಟ್ಟಣಶೆಟ್ಟಿ


ಶ್ರೀ ಎಮ್.ಎಮ್. ಮೆಟಗುಡ್ಡ


ಶ್ರೀ ಷಣ್ಮುಖಪ್ಪ ಮುಚ್ಚಂಡಿ


ಶ್ರೀ ಎಂ.ಆರ್. ವೆಂಕಟೇಶ್


ಶ್ರೀ ಎಸ್.ಎಂ. ಸುರೇಶ್


ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ


ಶ್ರೀ ರಾಜನಹಳ್ಳಿ ಜಿ. ಶ್ರೀನಿವಾಸಮೂರ್ತಿ


ಶ್ರೀಮತಿ ಬನಶಂಕರಿ ಹೆಚ್.ಆರ್.


ಶ್ರೀ ಆನಂದಗೌಡ ಎನ್. ಬಿರಾದಾರ

2 ಬ್ಯಾಂಕುಗಳು ಬಲಿಷ್ಠ : ಅಸುರಕ್ಷಿತ ಸಾಲಗಳ ಬಗ್ಗೆ ಆರ್‌ಬಿಐ ಎಚ್ಚರಿಕೆ

4 ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ ಅವರಿಗೆ “Best Chairman Performance Award” ರಾಷ್ಟ್ರೀಯ ಪ್ರಶಸ್ತಿ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಯುವಜನರು ಏಳಲಿ, ಎದ್ದೇಳಲಿ, ತಮ್ಮ ಜೀವನದ ಗುರಿ ಮುಟ್ಟಲು ಬೇಕಾದ ಆತ್ಮವಿಶ್ವಾಸ ಬೆಳಸಿಕೊಳ್ಳಲಿ

ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ. ಇದು ಸ್ವಾಮಿ ವಿವೇಕಾನಂದರು ನಮ್ಮ ದೇಶದ ಯುವಜನರನ್ನು ಬಡಿದೆಬ್ಬಿಸಲು ನೀಡಿದ ಮಹತ್ವದ ಸಂದೇಶವಾಗಿದೆ. ಸ್ವಾಮಿ ವಿವೇಕಾನಂದರು ದೇಶದ ಉದ್ದಗಲಕ್ಕೂ ಪ್ರವಾಸ ಮಾಡಿದ ಮಹಾನ್ ಆಧ್ಯಾತ್ಮಿಕ ನಾಯಕ, ಚಿಂತಕರಾಗಿದ್ದರು. ಶ್ರೀ ರಾಮಕೃಷ್ಣ ಪರಮಹಂಸರ ಪರಮ ಶಿಷ್ಯರಾದ ಸ್ವಾಮಿ ವಿವೇಕಾನಂದರು, 1893ರಲ್ಲಿ ಚಿಕಾಗೊದಲ್ಲಿ ನಡೆದ ವಿಶ್ವ ಧರ್ಮಗಳ ಸಂಸತ್ತಿನಲ್ಲಿ ಮಾತನಾಡುವ ಮೂಲಕ ತಮ್ಮ ಪ್ರಖರ ಚಿಂತನೆಯನ್ನು ವಿಶ್ವಕ್ಕೆ ಸಾರಿ ಖ್ಯಾತಿಗಳಿಸಿದರು. ಭಾರತದ ಯುವಜನತೆಗೆ ಸ್ಫೂರ್ತಿಯಾದರು. ಅವರ ಜೀವನ ಮತ್ತು ಸಂದೇಶಗಳು ಇಂದಿಗೂ ಯುವಜನರಿಗೆ ಸ್ಫೂರ್ತಿ ನೀಡುತ್ತಿವೆ.

ತನ್ನ ತ್ವತ್ವ ಚಿಂತನೆ, ಮಾತುಗಳಿಂದ ಸ್ವಾಮಿ ವಿವೇಕಾನಂದರು ದೇಶದ, ವಿದೇಶದ ಗಮನ ಸೆಳೆದವರಾಗಿದ್ದಾರೆ. ಸ್ವಾಮಿ ವಿವೇಕಾನಂದರ ಮಾತುಗಳು, ಬೋಧನೆಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ತಮ್ಮ ವಿಭಿನ್ನ ಚಿಂತನೆಗಳಿಂದ ಇಂದಿನ ಯುವಜನತೆಯ ಮೇಲೇ ಆಗಾಧವಾದ ಪ್ರಭಾವವನ್ನು ಬೀರಿರುವ ಹಿನ್ನೆಲೆಯಲ್ಲಿ ಜನವರಿ 12ರಂದು ಸ್ವಾಮಿ ವಿವೇಕಾನಂದರ ಜಯಂತಿಯನ್ನು ರಾಷ್ಟ್ರೀಯ ಯುವದಿನವೆಂದು ಆಚರಿಸಲಾಗುತ್ತಿದೆ.

ಪ್ರಸಕ್ತ ಸಂದರ್ಭದಲ್ಲಿ ನಮ್ಮ ದೇಶದ ಯುವಜನರು ಸಮಸ್ಯೆಗಳ ಸರಮಾಲೆಯನ್ನೇ ಎದುರಿಸುತ್ತಿರುವಂತೆ ಕಾಣುತ್ತಿದೆ. ದೇಶವನ್ನು ಮುನ್ನೆಡಸಬೇಕಾದ ಯುವಶಕ್ತಿಯು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದ್ದಾರೆ. ಒಂದೆಡೆ ಆರ್ಹ ಶಿಕ್ಷಣ ಪಡೆದಿದ್ದರೂ ಎಲ್ಲಿಯೂ ಸೂಕ್ತ ಉದ್ಯೋಗ ದೊರಕದೆ, ಆರ್ಥಿಕವಾಗಿ ಪೋಷಕರ ಮೇಲೆ ಅವಲಂಬಿಸಬೇಕಾದ ಪರಿಸ್ಥಿತಿ ಅವರನ್ನು ಒಂದು ಬಗೆಯ ಒತ್ತಡದಲ್ಲಿ ಸಿಲುಕಿಸಿದೆ. ಇದರಿಂದಾಗಿ ತಮ್ಮ ಆತ್ಮವಿಶ್ವಾಸವನ್ನು ಕಳೆದುಕೊಂಡಂತಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಕಳೆದ ವರ್ಷ ರಾಜ್ಯ ಸರ್ಕಾರ ಅವರುಗಳಿಗೆ ಧೈರ್ಯ ತುಂಬಲು ಪದವಿ ಪಡೆದ ನಿರುದ್ಯೋಗಿಗಳಿಗೆ ರೂ. 3000 ಹಾಗೂ ಡಿಪ್ಲೋಮಾ ಮಾಡಿದ ನಿರುದ್ಯೋಗಿಗಳಿಗೆ ರೂ. 1,500 ಭತ್ಯೆಯನ್ನು ಎರಡು ವರ್ಷಗಳ ಕಾಲ ಭತ್ಯೆಯನ್ನು ನೀಡುವ ಯುವನಿಧಿ ಯೋಜನೆಯನ್ನು ಜಾರಿಗೊಳಿಸಿದೆ. ನಿರುದ್ಯೋಗಿಗಳಾಗಿರುವ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾವಂತ ಯುವಜನರಲ್ಲಿ ಮತ್ತೆ ಆತ್ಮವಿಶ್ವಾಸ ತುಂಬಿ ಅವರುಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬಿ ಅವರ ಬದುಕಿಗೆ ಚೈತ್ಯತ್ಯ ತುಂಬುವ ಉದ್ದೇಶ ಈ ಯೋಜನೆಯದಾಗಿದೆ. ಅವರುಗಳನ್ನು ಸ್ವಾವಲಂಬಿಗಳಾಗಿಸುವ ಮೂಲಕ ಎರಡು ವರ್ಷ ಭತ್ಯೆಯ ಜೊತೆಗೆ ಉದ್ಯೋಗ ಕಂಡುಕೊಳ್ಳಲು ಬೇಕಿರುವ ಅಗತ್ಯ ಕೌಶಲ್ಯ ತರಬೇತಿಯನ್ನು ನೀಡುವ ಈ ಯೋಜನೆಯು ಫಲಾನುಭವಿಗಳು ಕೇವಲ ಉದ್ಯೋಗ ಹುಡುಕುವವರಾಗದೆ, ತಮ್ಮದೇ ಆದ ಸಣ್ಣ ಉದ್ಯಮಗಳನ್ನು ಪ್ರಾರಂಭಿಸಲು ಮತ್ತು ಸ್ವಯಂ ಉದ್ಯೋಗಿಗಳಾಗಲು ಬೇಕಾದ ಆತ್ಮವಿಶ್ವಾಸ ಮತ್ತು ತರಬೇತಿಯನ್ನು ನೀಡುತ್ತದೆ.

ಮುಂದಿನ ದಿನಗಳಲ್ಲಿ ನಮ್ಮ ಯುವಜನರು ತಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಂಡು ತಮ್ಮ ಕನಸನ್ನು ನನಸಾಗಿಸಲು ಮತ್ತು ಸ್ವಾವಲಂಬಿ ಬದುಕು ಸಾಗಿಸುವಂತಾಗಲಿ. ಯುವಜನರು ತಮ್ಮ ಭವಿಷ್ಯ ಉಜ್ವಲಗೊಳಿಸಿಕೊಳ್ಳಲು ಹೊಸ ಚೈತನ್ಯದಿಂದ ಏಳಲಿ, ಎದ್ದೇಳಲಿ, ತಮ್ಮ ಜೀವನದ ಗುರಿ ಮುಟ್ಟಲು ಬೇಕಾದ ಆತ್ಮವಿಶ್ವಾಸ ಬೆಳಸಿಕೊಳ್ಳಲಿ ಎಂದು ಹಾರೈಸುತ್ತೇನೆ.

▸▸ ಎಚ್.ಕೆ. ಪಾಟೀಲ

## ಬ್ಯಾಂಕುಗಳು ಬಲಿಷ್ಠ : ಅಸುರಕ್ಷಿತ ಸಾಲಗಳ ಬಗ್ಗೆ ಆರ್‌ಬಿಐ ಎಚ್ಚರಿಕೆ

**ಮುಂಬೈ** : ಜಾಗತಿಕವಾಗಿ ಏರುತ್ತಿರುವ ಏರಿಳಿತಗಳ ಹೊರತಾಗಿಯೂ, ಭಾರತೀಯ ಆರ್ಥಿಕತೆಯು ಉತ್ತಮ ಗತಿಯಲ್ಲಿದ್ದು, ಬಲವಾದ ದೇಶೀಯ ಬೇಡಿಕೆ, ದಾಖಲೆಯ ಕಡಿಮೆ ಹಣದುಬ್ಬರ ಮತ್ತು ಆರೋಗ್ಯಕರ ಬ್ಯಾಂಕ್ ಬ್ಯಾಲೆನ್ಸ್ ಶೀಟ್‌ಗಳಿಂದ ಬೆಂಬಲಿತವಾಗಿದೆ ಎಂದು ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ಸ್ಥಿರತೆ ವರದಿಯಲ್ಲಿ ತಿಳಿಸಿದೆ.

ಅಸುರಕ್ಷಿತ ಸಾಲ, ಫಿನ್‌ಟೆಕ್ ಮಾನ್ಯತೆ, ಬಾಹ್ಯ ಅನಿಶ್ಚಿತತೆಗಳು ಮತ್ತು ಸ್ಟೇಬಲ್‌ಕಾಯಿನ್‌ಗಳಿಂದ ಅಪಾಯಗಳ ಬಗ್ಗೆಯೂ ವರದಿಯಲ್ಲಿ ಎಚ್ಚರಿಸಲಾಗಿದೆ. ಬಲವಾದ ಬ್ಯಾಲೆನ್ಸ್ ಶೀಟ್‌ಗಳು, ಸುಲಭ ಹಣಕಾಸು ಪರಿಸ್ಥಿತಿಗಳು ಮತ್ತು ಕಡಿಮೆ ಹಣಕಾಸು ಮಾರುಕಟ್ಟೆಯ ಚಂಚಲತೆಯಿಂದ ಹಣಕಾಸು ವ್ಯವಸ್ಥೆಯು "ದೃಢ ಮತ್ತು ಸ್ಥಿತಿಸ್ಥಾಪಕತ್ವ" ವನ್ನು ಹೊಂದಿದೆ ಎಂದು ವರದಿ ಹೇಳಿದೆ. ಆದಾಗ್ಯೂ, ಭೌಗೋಳಿಕ ಮತ್ತು ವ್ಯಾಪಾರ-ಸಂಬಂಧಿತ ಅನಿಶ್ಚಿತತೆಗಳು ಹಣಕಾಸಿನ ಸ್ಥಿರತೆಗೆ ಅಲ್ಪಾವಧಿಯ ಅಪಾಯಗಳನ್ನುಂಟುಮಾಡುತ್ತವೆ ಎಂದು ವರದಿ ಎಚ್ಚರಿಸಿದೆ.

ಆರ್ಥಿಕ ಮುನ್ನೋಟ ಸಕಾರಾತ್ಮಕವಾಗಿ ಉಳಿದಿದೆ ಎಂದು ಒತ್ತಿಹೇಳುತ್ತಾ, ಆರ್ಥಿಕ ವರ್ಷ 26ರ ಮೊದಲ ಎರಡು ತ್ರೈಮಾಸಿಕಗಳಲ್ಲಿ ನೈಜ ಜಿಡಿಪಿ ಬೆಳವಣಿಗೆ ಆಶ್ಚರ್ಯಕರವಾಗಿ ಏರಿಕೆಯಾಗಿದೆ. ಮೊದಲ ತ್ರೈಮಾಸಿಕದಲ್ಲಿ ಶೇ. 7.8 ಮತ್ತು ಎರಡನೇ ತ್ರೈಮಾಸಿಕದಲ್ಲಿ 2 ರಲ್ಲಿ ಶೇ. 8.2 ದಾಖಲಾಗಿದೆ. ಇದು ಮೊದಲಾರ್ಧದಲ್ಲಿ ಶೇ. 8ರಷ್ಟು ಕಡಿಮೆಯಾಗಿದೆ ಎಂದು ವರದಿ ಗಮನಿಸಿದೆ.

ಬಲವಾದ ಖಾಸಗಿ ಬಳಕೆ ಮತ್ತು ಸಾರ್ವಜನಿಕ ಹೂಡಿಕೆಯಿಂದ ಬೆಳವಣಿಗೆಗೆ ಬೆಂಬಲ ನೀಡಲಾಗಿದೆ ಎಂದು ವರದಿ ತಿಳಿಸಿದೆ. ಕಡಿಮೆ ಹಣದುಬ್ಬರ, ಸುಲಭ ಹಣಕಾಸು ಪರಿಸ್ಥಿತಿಗಳು, ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಗಾಲ, ತೆರಿಗೆ ಸುಧಾರಣೆಗಳು ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ ನಿರಂತರ ವಿಸ್ತರಣೆಯಿಂದಾಗಿ ಬೆಳವಣಿಗೆಯ ಮುನ್ನೋಟವು ಸಕಾರಾತ್ಮಕವಾಗಿಯೇ ಉಳಿದಿದೆ ಎಂದು ವರದಿ ಹೇಳಿದೆ.

ಬ್ಯಾಂಕಿಂಗ್ ಕಡೆಯಿಂದ, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಕೆಟ್ಟ ಸಾಲ ಅನುಪಾತವು ಶೇ.2.1 ರಷ್ಟು ಕನಿಷ್ಠಕ್ಕೆ ಇಳಿದಿದ್ದು, ಕಳೆದ ವರ್ಷದ ಅವಧಿಯಲ್ಲಿ ಇದು ಶೇ.2.5 ರಷ್ಟಿತ್ತು ಎಂದು ಕೇಂದ್ರ ಬ್ಯಾಂಕ್ ಹೇಳಿದೆ. ಆದರೆ ನಿವ್ವಳ ಎನ್‌ಪಿಎಗಳು ಹಲವು ದಶಕಗಳಲ್ಲಿ ಮೊದಲ ಬಾರಿಗೆ 50 ಬಿಪಿಎಸ್‌ಗಿಂತ ಕಡಿಮೆಯಿದ್ದು, ಮಾರ್ಚ್ 2027 ರ ವೇಳೆಗೆ ಕೇಂದ್ರ ಬ್ಯಾಂಕಿನ ಮೂಲ ಸನ್ನಿವೇಶದಲ್ಲಿ ಶೇ.1.9 ಕ್ಕೆ ಮತ್ತಷ್ಟು ಸುಧಾರಿಸುವ ನಿರೀಕ್ಷೆಯಿದೆ. ಬಂಡವಾಳ ದೃಷ್ಟಿಕೋನದಿಂದ, ಸೆಪ್ಟೆಂಬರ್ 2025ರ ಹೊತ್ತಿಗೆ ಬಂಡವಾಳ ಮತ್ತು ಅಪಾಯ-ತೂಕದ ಆಸ್ತಿ ಅನುಪಾತ ಪ್ರಬಲವಾಗಿ ಉಳಿದಿದೆ.

# ತ್ಯಾಗರಾಜ ಸಹಕಾರ ಬ್ಯಾಂಕಿನ ಕ್ಯಾಲೆಂಡರ್, ಡೈರಿ ಬಿಡುಗಡೆ



ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ 2026ರ ಕ್ಯಾಲೆಂಡರ್ ಮತ್ತು ಡೈರಿಯನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ.ಪಾಟೀಲರು ಬಿಡುಗಡೆ ಮಾಡಿದರು.

# ನಮ್ಮ ದೇಶ 4ನೇ ಅತಿದೊಡ್ಡ ಆರ್ಥಿಕತೆಯಾದರೂ ತಲಾವಾರು ಜಿಡಿಪಿಯಲ್ಲಿ ಜಪಾನ್‌ಗಿಂತಲೂ 12 ಪಟ್ಟು, ಜರ್ಮನಿಗಿಂತಲೂ 20 ಪಟ್ಟು ಕೆಳಗಿದೆ


**ನವದೆಹಲಿ :** ಭಾರತ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಜಪಾನ್ ಅನ್ನು ಹಿಂದಿಕ್ಕುತ್ತಿದೆ ಮತ್ತು ಮುಂದಿನ ಮೂರು ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕುವ ನಿರೀಕ್ಷೆಯಿದೆ ಎಂದು ಸರ್ಕಾರದ ವರ್ಷಾಂತ್ಯದ ಆರ್ಥಿಕ ವಿಮರ್ಶೆ ಪ್ರಕಟವಾಗಿದೆ. ಆದಾಗ್ಯೂ, 2026ರಲ್ಲಿ ಅಂತಿಮ ವಾರ್ಷಿಕ ಒಟ್ಟು ಜಿಡಿಪಿ ಅಂಕಿ ಅಂಶಗಳು ಬಿಡುಗಡೆಯಾಗುವ ದತ್ತಾಂಶವನ್ನು ಅವಲಂಬಿಸಿರುತ್ತದೆ ಎಂದು ಹೇಳಲಾಗಿದೆ. "ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ ಮತ್ತು ಈ ವೇಗವನ್ನು ಉಳಿಸಿಕೊಳ್ಳಲು ಉತ್ತಮ ಸ್ಥಾನದಲ್ಲಿದೆ" ಎಂದು ತಡವಾಗಿ ಬಿಡುಗಡೆಯಾದ ಕೇಂದ್ರ ಸರ್ಕಾರದ ಆರ್ಥಿಕ ಸಂಕ್ಷಿಪ್ತ ಟಿಪ್ಪಣಿ ತಿಳಿಸಿದೆ.

"ಜಿಡಿಪಿ 4.18 ಟ್ರಿಲಿಯನ್ ಡಾಲರ್ ಮೌಲ್ಯದೊಂದಿಗೆ, ಭಾರತವು ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ ಮತ್ತು ಮುಂದಿನ ಎರಡೂವರೆ, ಮೂರು ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಿ ಮೂರನೇ ಸ್ಥಾನಕ್ಕೆ ಜಿಗಿಯಲು ಸಿದ್ಧವಾಗಿದೆ. 2030 ರ ವೇಳೆಗೆ ಜಿಡಿಪಿ 7.3 ಟ್ರಿಲಿಯನ್ ಡಾಲರ್ ಆಗಲಿದೆ ಎಂದು ಅಂದಾಜಿಸಲಾಗಿದೆ". 2026ರಲ್ಲಿ ಭಾರತವು ಜಪಾನ್‌ನ 4.46 ಟ್ರಿಲಿಯನ್ ಡಾಲರ್ ಆರ್ಥಿಕತೆ ಹಿಂದಿಕ್ಕಿ 4.51 ಟ್ರಿಲಿಯನ್ ಡಾಲರ್ ಆರ್ಥಿಕತೆ ಹೊಂದಲಿದೆ ಎಂದು ಅಂದಾಜಿಸಿದೆ.

ನಿರಂತರ ಆರ್ಥಿಕ ಬೆಳವಣಿಗೆಯು "ನಿರಂತರ ಜಾಗತಿಕ ವ್ಯಾಪಾರ ಅನಿಶ್ಚಿತತೆಗಳ ನಡುವೆಯೂ" ಅದರ ಸ್ಥಿತಿಸ್ಥಾಪಕತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ಭಾರತ ಹೇಳಿದೆ. ಆದರೆ ತಲಾವಾರು ಇತರ ದೇಶಗಳಿಗೆ ಹೋಲಿಸಿದರೆ ತುಂಬಾ ಕಡಿಮೆ ಇದೆ. ಜನಸಂಖ್ಯೆಯ ವಿಷಯದಲ್ಲಿ, ಭಾರತವು 2023 ರಲ್ಲಿ ನೆರೆಯ ಚೀನಾವನ್ನು ಹಿಂದಿಕ್ಕಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಯಿತು. ವಿಶ್ವಬ್ಯಾಂಕಿನ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಭಾರತದ ತಲಾವಾರು ಜಿಡಿಪಿ 2024ರಲ್ಲಿ 2,694 ಡಾಲರ್ ಆಗಿತ್ತು. ಜಪಾನ್ ತಲಾವಾರು ಜಿಡಿಪಿ 32,487 ಡಾಲರ್ ಇದೆ. ಇದು ಭಾರತಕ್ಕಿಂತ 12 ಪಟ್ಟು ಹೆಚ್ಚು ಮತ್ತು ಜರ್ಮನಿಯ 56,103 ಡಾಲರ್‌ಗಿಂತಲೂ 20 ಪಟ್ಟು ಕಡಿಮೆ ಇದೆ.

ಸರ್ಕಾರಿ ಅಂಕಿ ಅಂಶಗಳ ಪ್ರಕಾರ, ಭಾರತದ 1.4 ಶತಕೋಟಿ ಜನರಲ್ಲಿ ಕಾಲು ಭಾಗಕ್ಕಿಂತ ಹೆಚ್ಚು ಜನರು 10 ರಿಂದ 26 ವರ್ಷ ವಯಸ್ಸಿನವರಾಗಿದ್ದಾರೆ ಮತ್ತು ಲಕ್ಷಾಂತರ ಯುವ ಪದವೀಧರರಿಗೆ ಉತ್ತಮ ಸಂಬಳದ ಉದ್ಯೋಗಗಳನ್ನು ಸೃಷ್ಟಿಸಲು ದೇಶ ಈಗಾಗಲೇ ಹೆಣಗಾಡುತ್ತಿದೆ. ಮಾರ್ಚ್ 31ಕ್ಕೆ ಕೊನೆಗೊಂಡ 12 ತಿಂಗಳಲ್ಲಿ ಆರ್ಥಿಕ ಬೆಳವಣಿಗೆ ನಾಲ್ಕು ವರ್ಷಗಳ ಕನಿಷ್ಠ ಮಟ್ಟಕ್ಕೆ ತಲುಪಿದ ನಂತರ, ಈ ವರ್ಷ ತೆರಿಗೆ ಕಡಿತಗಳನ್ನು ಅನಾವರಣಗೊಳಿಸಲಾಗಿದ್ದು ಮತ್ತು ಕಾರ್ಮಿಕ ಕಾನೂನು ಸುಧಾರಣೆ ಜಾರಿಗೆ ತರಲಾಗಿದೆ.

ವಾಷಿಂಗ್ಟನ್‌ನೊಂದಿಗಿನ ವ್ಯಾಪಾರ ಒಪ್ಪಂದದ ಕೊರತೆ ಮತ್ತು ದೇಶದ ಸರಕುಗಳ ಮೇಲೆ ಸುಂಕಗಳ ಪರಿಣಾಮದ ನಡುವೆ, ಡಿಸೆಂಬರ್ ಆರಂಭದಲ್ಲಿ ಡಾಲರ್ ವಿರುದ್ಧ ಭಾರತದ ರೂಪಾಯಿ ಮೌಲ್ಯ ದಾಖಲೆಯ ಕನಿಷ್ಠ ಮಟ್ಟಕ್ಕೆ ತಲುಪಿ – 2025 ರಲ್ಲಿ ರೂಪಾಯಿ ಮೌಲ್ಯ ಸುಮಾರು ಶೇ.5 ರಷ್ಟು ಕುಸಿದಿದೆ.



# ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ ಅವರಿಗೆ "Best Chairman Performance Award" ರಾಷ್ಟ್ರೀಯ ಪ್ರಶಸ್ತಿ




ದಿನಾಂಕ : 22-12-2025ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣದಲ್ಲಿ ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರಿಗೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ "Best Chairman Performance" ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕೇಂದ್ರದ ರಾಜ್ಯ ಖಾತೆಯ ಮಾಜಿ ಸಚಿವರಾದ ಶ್ರೀ ನಾಗ್‌ಮಣಿ ಕುಶ್ವಾಹ, ದೆಹಲಿ ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ರಾಮ್ ನಿವಾಸ್ ಗೋಯೆಲ್, ಉತ್ತರಾಖಂಡದ ಶಾಸಕರಾದ ಶ್ರೀ ಪಿ.ಸಿ.ನೈಲ್‌ವಾಲ್ ಪ್ರಶಸ್ತಿಯನ್ನು ಪ್ರಧಾನ ಮಾಡಿದರು.

# ವಿಜಯಪುರದ ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



**ವಿಜಯಪುರ:** ದಿನಾಂಕ: 30.12.2025ರಂದು ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅರ್ಜುನ ಜಿ. ಲಮಾಣಿ (ಶಿಕ್ಷಣ ಇಲಾಖೆ) ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಪುಷ್ಪಾ ಎಸ್. ಗಚ್ಚಿನಮಠ (ಶಿಕ್ಷಣ ಇಲಾಖೆ) ಇವರುಗಳು ಮುಂದಿನ ಅವಧಿಯವರೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅರ್ಜುನ ಜಿ. ಲಮಾಣಿ ಇವರು 3ನೇ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅದರಂತೆ ಪುಷ್ಪಾ ಎಸ್. ಗಚ್ಚಿನಮಠ ಇವರು ಮೊದಲನೇ ಬಾರಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಚುನಾವಣಾ ಪ್ರಕ್ರಿಯೆಯನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಎಮ್.ಕೆ. ಜೋಶಿ ಇವರು ಜರುಗಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ಅರವಿಂದ ಭೋ. ಹೂಗಾರ, ಹಣಮಂತ ಬಿ. ಕೊಣದಿ, ಪ್ರಶಾಂತ ಎಸ್. ಚನಗೊಂಡ, ಆನಂದಗೌಡ ಎನ್. ಬಿರಾದಾರ, ಅಲ್ಲಾಭಕ್ಷ ಎಮ್. ವಾಲಿಕಾರ, ಅಶೋಕ ವಿ. ಚನಬಸಗೋಳ, ಮಲಕಪ್ಪ ಎಸ್. ಟಕ್ಕಳಕಿ, ಚಂದ್ರಶೇಖರ ಟಿ. ಜಿತ್ತಿ, ಎಸ್.ಎಸ್. ಕೆರೂರ, ಹನುಮಂತರಾಯ (ಕಿರಣ) ಸಿಂದಗಿ, ಮಹೇಶ ನಾಯಿಕ, ಸರಫರಾಜ ಎಸ್. ಕಂದಗಲ್, ಗೀತಾ ಎಸ್. ಹತ್ತಿ (ಕಳಸಗೊಂಡ), ಹಾಗೂ ಹಿತೈಷಿಗಳು, ವ್ಯವಸ್ಥಾಪಕರಾದ ಸಿ. ಎಸ್. ಹಿರೇಮಠ ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು ಮತ್ತು ಬ್ಯಾಂಕಿನ ಸದಸ್ಯರು ಶುಭ ಹಾರೈಸಿದರು.

# ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ



ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯು.ಎಸ್. ಪ್ರೀತಮ್, ಉಪಾಧ್ಯಕ್ಷರಾದ ಶ್ರೀ ಡಿ.ಎಂ.ಹರೀಶ್, ನಿರ್ದೇಶಕರು ಮತ್ತು ಸಿ.ಇ.ಓ ರವರ ಉಪಸ್ಥಿತಿಯಲ್ಲಿ ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಇದರ 2026ನೇ ಸಾಲಿನ ಕ್ಯಾಲೆಂಡರ್‌ನ್ನು ಬಿಡುಗಡೆ ಮಾಡಲಾಯಿತು.

## ದಿ ಹುಬ್ಬಳ್ಳಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಕ್ಯಾಲೆಂಡರ್ ಬಿಡುಗಡೆ



ದಿ ಹುಬ್ಬಳ್ಳಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕು ಜನವರಿ 31, 2026 ರಂದು 120 ವರ್ಷಗಳನ್ನು ಪೂರೈಸಲಿದ್ದು ಪ್ರತಿ ವರ್ಷದಂತೆ ನಮ್ಮ ಬ್ಯಾಂಕಿನ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ದಿನಾಂಕ : 30.12.2025 ರಂದು ಬ್ಯಾಂಕಿನ ಆಡಳಿತ ಕಚೇರಿಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪಂಚಾಕ್ಷರಿ ಬಿ ಮಠಪತಿ ಇವರು ಎಲ್ಲರನ್ನು ಸ್ವಾಗತಿಸಿ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಶ್ರೀ ಜ್ಯೋತಿರ್ಲಿಂಗ ಚ ಹೊನಕಟ್ಟಿ, ಪೊಲೀಸ್ ಇನ್ಸಪೆಕ್ಟರ್, ಮಹಿಳಾ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅತಿಥಿಗಳು ಬ್ಯಾಂಕ್ ಉದ್ದೇಶಿಸಿ ಮಾತನಾಡಿ, ಯಾವುದೇ ಕೆಲಸ ಕಾರ್ಯವು ಯಶಸ್ವಿಯನ್ನು ಹೊಂದಬೇಕಾದರೆ ಸಹಕಾರದ ಪಾತ್ರವು ಬಹಳ ಮುಖ್ಯವಾಗಿರುತ್ತದೆ. ಸಹಕಾರ ಮನೋಭಾವನೆಯಿಂದ ಜನಸಾಮಾನ್ಯರಿಗೆ ಸೇವೆಯನ್ನು ನೀಡಲು ಯಶಸ್ಸನ್ನು ಕಾಣಬಹುದು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಕ್ರಮ ಆರ್. ಸಿರೂರ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಬ್ಯಾಂಕು 120 ವರ್ಷಗಳನ್ನು ಪೂರೈಸಲಿದ್ದು ಅತ್ಯುತ್ತಮ ಸಹಕಾರಿ ಬ್ಯಾಂಕ್ ಪ್ರಶಸ್ತಿಯನ್ನು ಪಡೆಯಲಾಗಿದೆ. ಮುಂದೆ ಕರ್ನಾಟಕದ 5 ಅತ್ಯುತ್ತಮ ಸಹಕಾರ ಬ್ಯಾಂಕುಗಳಲ್ಲಿ ಒಂದು ನಮ್ಮ ಬ್ಯಾಂಕು ಗುರಿ ಹೊಂದಲು ಉದ್ದೇಶಿಸಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಗಿರೀಶಭಾಯಿ ಡಿ ಉಪಾಧ್ಯಾಯ, ನಿರ್ದೇಶಕರುಗಳಾದ ಶ್ರೀ ವೆಂಕಟೇಶ ಎಲ್. ಉಪ್ಪಾರ, ಶ್ರೀ ಆನಂದ ಆರ್. ಮನಗೊಳಿ, ಶ್ರೀ ಮಹೇಶ ಬಿ. ಬುರಲಿ, ಶ್ರೀಮತಿ ಪ್ರಿಯಾ ಎಸ್. ಕಲಾಲ, ಶ್ರೀ ರವೀಂದ್ರ ಜಿ. ಬೆಂತೂರ, ಶ್ರೀ ಸದಾಶಿವ ಸಿ. ಕಾರಡಗಿ, ಶ್ರೀ ಬಸವರಾಜ ತೇರದಾಳ, ಶ್ರೀ ಚಂದ್ರಶೇಖರ ಎಮ್. ಕಮಡೊಳ್ಳಿ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು ಹಾಜರಿದ್ದರು ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಕ್ರಮ ಆರ್. ಸಿರೂರ ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಜಯಪುರ ಸಹಕಾರಿ ಬ್ಯಾಂಕಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ





ಶ್ರೀ ಎಸ್.ಜಿ. ಪಾಟೀಲ
(ಜಾಡರ ಬಬಲಾದ)
ಅಧ್ಯಕ್ಷರು



ಶ್ರೀ ಸತೀಶ ಬಿ. ಪಾಟೀಲ
(ಕನಮಡಿ)
ಉಪಾಧ್ಯಕ್ಷರು

**ವಿಜಯಪುರ :** ವಿಜಯಪುರ ಸಹಕಾರಿ ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರ ಚುನಾವಣೆಯು ದಿನಾಂಕ : 22–12–2025 ರಂದು ಜರುಗಿತು. ಶ್ರೀ ಸಿದಮಲಗೌಡ ಜಿ. ಪಾಟೀಲ, ಶ್ರೀ ಸತೀಶ ಬಿ. ಪಾಟೀಲ, ಶ್ರೀ ಶಾಂತಿಲಾಲ ಎಸ್. ಓಸ್ವಾಲ, ಶ್ರೀ ಅರವಿಂದ ಜಿ. ಮಂಗಳವೇಢೆ, ಶ್ರೀ ಮಲ್ಲಿಕಾರ್ಜುನ ಬಿ. ಪಾಟೀಲ, ಶ್ರೀ ಗೂಳಪ್ಪ ಎಸ್. ಶಟಗಾರ, ಶ್ರೀ ಬಸವರಾಜ ಎಸ್. ಬಿಜ್ಜರಗಿ, ಶ್ರೀ ರಮೇಶ ಬಿ. ಕುಲಕರ್ಣಿ, ಅಮೃತಾ ಬಿ. ಚೌದ್ರಿ, ಶ್ರೀಮತಿ ಅಂಜಲಿ ಎ. ಉಪ್ಪೀನ, ಶ್ರೀಮತಿ ಕೀರ್ತಿ ಗಿ. ಶಟಗಾರ, ಶ್ರೀ ಶ್ರೀಶೈಲ ಜಿ. ಬಿರಾದಾರ ಅವರುಗಳು ನಿರ್ದೇಶಕರುಗಳಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ನಂತರ ನಡೆದ ಪದಾಧಿಕಾರಿಗಳ ಚುನಾವಣೆಯು ದಿನಾಂಕ : 01–01–2026 ರಂದು ಜರುಗಿದ್ದು ಶ್ರೀ ಸಿದಮಲಗೌಡ ಜಿ. ಪಾಟೀಲ ಇವರು ಅಧ್ಯಕ್ಷರಾಗಿ ಹಾಗೂ ಶ್ರೀ ಸತೀಶ ಬಿ.ಪಾಟೀಲ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಪುನರಾಯ್ಕೆಯಾಗಿರುತ್ತಾರೆ.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ವಿಜಯಪುರದ ಚೈತನ್ಯ ಮಹಿಳಾ ಸಹಕಾರ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರು ಹಾಗೂ ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ಸ್ವರ್ಣಭಾರತಿ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ನಾರಾಯಣಸ್ವಾಮಿರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಶಿವರಾಮ ಎಸ್. ಉಪಸ್ಥಿತರಿದ್ದರು.



## ನಿಮ್ಮ ಪ್ರಶ್ನೆ ನಮ್ಮ ಉತ್ತರ

ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.



**01. ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ ಅಕೌಂಟ್ (BSBDA) ಎಂದರೇನು? 'ಸ್ಮಾಲ್ ಅಕೌಂಟ್'ನೊಂದಿಗಿನ ವ್ಯತ್ಯಾಸ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ** : ಬೇಸಿಕ್ ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ ಅಕೌಂಟ್ (BSBDA) ಅಥವಾ ಸಾಮಾನ್ಯವಾಗಿ "ಜೀರೋ ಬ್ಯಾಲೆನ್ಸ್" ಅಥವಾ "ನೋ-ಫ್ರಿಲ್ಸ್" ಖಾತೆ ಎಂದು ಕರೆಯಲ್ಪಡುವ ಈ ಸೇವಿಂಗ್ಸ್ ಖಾತೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (RBI) ಹಣಕಾಸು ಸೇರ್ಪಡೆಯನ್ನು ಉತ್ತೇಜಿಸಲು ಪರಿಚಯಿಸಿದೆ. ಆರ್ಥಿಕವಾಗಿ ದುರ್ಬಲ ವರ್ಗದವರು, ಕನಿಷ್ಠ ಬ್ಯಾಲೆನ್ಸ್ ನಿಯಮ ಅಥವಾ ಹೆಚ್ಚಿನ ಶುಲ್ಕಗಳ ಹೊರೆ ಇಲ್ಲದೆ ಮೂಲಭೂತ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಇದು ಸಹಾಯ ಮಾಡುತ್ತದೆ. 2012ರಲ್ಲಿ ಪರಿಚಯಿಸಲಾದ ಈ ಖಾತೆಗಳು ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ (PMJDY) ಅಡಿಯಲ್ಲಿರುವ ಎಲ್ಲಾ ಖಾತೆಗಳಂತೆಯೇ ಕಾರ್ಯನಿರ್ವಹಿಸುತ್ತವೆ.

**ಮುಖ್ಯ ಲಕ್ಷಣಗಳು (ಜನವರಿ 01, 2026ರ ಪ್ರಕಾರ)**

**ಪ್ರಸ್ತುತ RBI ಮಾರ್ಗಸೂಚಿಗಳ ಪ್ರಕಾರ ಮುಖ್ಯ ಲಕ್ಷಣಗಳು:**

- **ಜೀರೋ ಕನಿಷ್ಠ ಬ್ಯಾಲೆನ್ಸ್ :** ಯಾವುದೇ ಬ್ಯಾಲೆನ್ಸ್ ಕಾಯ್ದಿರಿಸುವ ಅಗತ್ಯವಿಲ್ಲ; ಕಡಿಮೆ ಅಥವಾ ಜೀರೋ ಬ್ಯಾಲೆನ್ಸ್‌ಗೆ ದಂಡ ಇಲ್ಲ.
- **ಆರಂಭಿಕ ಠೇವಣಿ ಅಗತ್ಯವಿಲ್ಲ :** ಜೀರೋ ಬ್ಯಾಲೆನ್ಸ್‌ನೊಂದಿಗೆ ಖಾತೆ ತೆರೆಯಬಹುದು.
- **ಉಚಿತ ಮೂಲಭೂತ ಸೇವೆಗಳು :** ಶಾಖೆ/ATMನಲ್ಲಿ ಹಣ ಠೇವಣಿ ಮತ್ತು ಹಿಂಪಡೆಯುವಿಕೆ.
  ಎಲೆಕ್ಟ್ರಾನಿಕ್ ಮಾರ್ಗಗಳ ಮೂಲಕ (NEFT/RTGS/IMPS/UPI) ಅಥವಾ ಚೆಕ್ ಮೂಲಕ ಹಣ ಸ್ವೀಕೃತಿ.
  ಉಚಿತ ATM-ಕಮ್-ಡೆಬಿಟ್ ಕಾರ್ಡ್ (ಹೆಚ್ಚಿನ ಕಡೆಗಳಲ್ಲಿ ಮೂಲ RuPay ಕಾರ್ಡ್).

**ಪಾಸ್‌ಬುಕ್ ಸೌಲಭ್ಯ.**

- **ಮಿತಿಯಲ್ಲಿರುವ ಉಚಿತ ಹಿಂಪಡೆಯುವಿಕೆಗಳು :** ಸಾಮಾನ್ಯವಾಗಿ ತಿಂಗಳಿಗೆ ಕನಿಷ್ಠ 4 ಉಚಿತ ಹಿಂಪಡೆಯುವಿಕೆಗಳು (ATM ಸೇರಿದಂತೆ).
- **ಬಡ್ಡಿ :** ಸಾಮಾನ್ಯ ಸೇವಿಂಗ್ಸ್ ಖಾತೆಗಳಂತೆಯೇ ಬಡ್ಡಿ (ಪ್ರಸ್ತುತ ಸುಮಾರು 2.7–4%).
- **ನಿರ್ಬಂಧಗಳು :** ಎಲ್ಲಾ ಬ್ಯಾಂಕುಗಳಲ್ಲಿ ಒಬ್ಬ ವ್ಯಕ್ತಿಗೆ ಕೇವಲ ಒಂದು BSBDA ಮಾತ್ರ.
  ಸಾಮಾನ್ಯವಾಗಿ ಓವರ್‌ಡ್ರಾಫ್ಟ್ ಸೌಲಭ್ಯ ಇಲ್ಲ. ಕೆಲವು ಬ್ಯಾಂಕುಗಳಲ್ಲಿ ಚೆಕ್ ಬುಕ್ ಮಿತಿಯಲ್ಲಿರಬಹುದು ಅಥವಾ ನೀಡದಿರಬಹುದು.

**ಮುಂದಿನ ಬದಲಾವಣೆಗಳು (ಏಪ್ರಿಲ್ 1, 2026ರಿಂದ ಜಾರಿ)**

2025ರ ಡಿಸೆಂಬರ್‌ನಲ್ಲಿ RBI ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, BSBDAಯನ್ನು ಆಧುನಿಕಗೊಳಿಸಿ ಡಿಜಿಟಲ್ ಬ್ಯಾಂಕಿಂಗ್‌ಗೆ ಹೊಂದಿಕೊಳ್ಳುವಂತೆ ಮಾಡಲಾಗಿದೆ. ಮುಖ್ಯ ಬದಲಾವಣೆಗಳು:

- **ವಿಸ್ತೃತ ಉಚಿತ ಸೌಲಭ್ಯಗಳು:**
  ಹಣ ಠೇವಣಿಗೆ ಯಾವುದೇ ಸಂಖ್ಯೆ ಅಥವಾ ಮೌಲ್ಯದ ಮಿತಿ ಇಲ್ಲ (ನಗದು ಅಥವಾ ಯಾವ ಮಾರ್ಗದಲ್ಲಾದರೂ).
  ಉಚಿತ ATM/ಡೆಬಿಟ್‌ಕಾರ್ಡ್ (ವಾರ್ಷಿಕ ಶುಲ್ಕ ಇಲ್ಲ).
  ವರ್ಷಕ್ಕೆ ಕನಿಷ್ಠ 25 ಚೆಕ್ ಎಲೆಗಳ ಉಚಿತ ಚೆಕ್‌ಬುಕ್.
  ಉಚಿತ ಡಿಜಿಟಲ್ ಬ್ಯಾಂಕಿಂಗ್ (ಮೊಬೈಲ್/ಇಂಟರ್ನೆಟ್ ಬ್ಯಾಂಕಿಂಗ್).
  ಉಚಿತ ಪಾಸ್‌ಬುಕ್ ಅಥವಾ ಮಾಸಿಕ ಸ್ಟೇಟ್‌ಮೆಂಟ್.
  ಅನಿಯಮಿತ ಡಿಜಿಟಲ್ ವಹಿವಾಟುಗಳು (UPI, NEFT, RTGS, IMPS, PoS) - ಇವು ಹಿಂಪಡೆಯುವಿಕೆ ಮಿತಿಯಲ್ಲಿ ಎಣಿಕೆಯಾಗುವುದಿಲ್ಲ.
- ತಿಂಗಳಿಗೆ ಕನಿಷ್ಠ 4 ಉಚಿತ ಹಿಂಪಡೆಯುವಿಕೆಗಳು (ಶಾಖೆ/ATM; ಇದಕ್ಕಿಂತ ಹೆಚ್ಚಿದ್ದರೆ ಶುಲ್ಕ ವಿಧಿಸಬಹುದು).
- **ಪರಿವರ್ತನೆ :** ಗ್ರಾಹಕರ ಕೋರಿಕೆ ಮೇರೆಗೆ ಸಾಮಾನ್ಯ ಸೇವಿಂಗ್ಸ್ ಖಾತೆಯನ್ನು BSBDAಗೆ ಪರಿವರ್ತಿಸಬಹುದು.
- ಬ್ಯಾಂಕುಗಳು BSBDAಯನ್ನು ಸಕ್ರಿಯವಾಗಿ ಪ್ರಚಾರ ಮಾಡಬೇಕು ಮತ್ತು ಸಾಮಾನ್ಯ ಸೇವಿಂಗ್ಸ್ ಖಾತೆಯೊಂದಿಗಿನ ವ್ಯತ್ಯಾಸಗಳನ್ನು ವಿವರಿಸಬೇಕು.

**'ಸ್ಮಾಲ್ ಅಕೌಂಟ್'ನೊಂದಿಗಿನ ವ್ಯತ್ಯಾಸ**

**BSBDAಯನ್ನು ಸ್ಮಾಲ್ ಅಕೌಂಟ್ ಜೊತೆ ಗೊಂದಲಕ್ಕೀಡು ಮಾಡಬೇಡಿ:**

- ಸ್ಮಾಲ್ ಅಕೌಂಟ್‌ಗಳು ಸಂಪೂರ್ಣ ದಾಖಲೆಗಳಿಲ್ಲದವರಿಗೆ ಸೀಮಿತ KYC ಯೊಂದಿಗೆ ತೆರೆಯಲಾಗುತ್ತವೆ.
- **ಇವುಗಳಲ್ಲಿ ಕಟ್ಟುನಿಟ್ಟಾದ ಮಿತಿಗಳಿವೆ :** ವರ್ಷಕ್ಕೆ ರೂ.1 ಲಕ್ಷ ಕ್ರೆಡಿಟ್, ತಿಂಗಳಿಗೆ ರೂ. 10,000 ಡೆಬಿಟ್, ಗರಿಷ್ಠ ರೂ.50,000 ಬ್ಯಾಲೆನ್ಸ್.
- BSBDAಗೆ ಸಂಪೂರ್ಣ KYC ಬೇಕು ಆದರೆ ವಹಿವಾಟು/ಬ್ಯಾಲೆನ್ಸ್ ಮಿತಿ ಇಲ್ಲ (ಹಿಂಪಡೆಯುವಿಕೆ ಮಿತಿ ಹೊರತುಪಡಿಸಿ).

**ಯಾರು BSBDA ತೆರೆಯಬೇಕು?**

ಕಡಿಮೆ ಆದಾಯದವರು, ವಿದ್ಯಾರ್ಥಿಗಳು, ದಿನಗೂಲಿ ಕೆಲಸಗಾರರು ಅಥವಾ ಮೂಲಭೂತ ಅಗತ್ಯಗಳಿಗೆ ಸರಳ ಮತ್ತು ಶುಲ್ಕ-ರಹಿತ ಖಾತೆ ಬೇಕಾದವರಿಗೆ ಇದು ಉತ್ತಮ. ಇದು ಬಡ್ಡಿ ನೀಡುತ್ತದೆ ಮತ್ತು ಹಣವನ್ನು ಸುರಕ್ಷಿತವಾಗಿ ಇರಿಸುತ್ತದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ.

ಪ್ರಯುಕ್ತ, ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬೆಂಗಳೂರಲ್ಲಿ ಅಂಗಾಂಗ ಕಸಿಗಾಗಿ ಅಜೀಂ ಪ್ರೇಮ್ ಜಿ ಫೌಂಡೇಶನ್ ವಿಶೇಷ 1000 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಿದೆ. ಇದಕ್ಕಾಗಿ ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ಆವರಣದಲ್ಲಿ 10 ಎಕರೆಯಲ್ಲಿ ಎಲ್ಲಾ ಅಂಗಾಂಗ ಕಸಿ ಒಳಗೊಂಡಂತೆ ಚಾರಿಟಬಲ್ ಸೂಪರ್ ಸ್ಪೆಷಾಲಿಟಿ ಟರ್ಷಿಯರಿ ಆರೈಕೆ ಆಸ್ಪತ್ರೆ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ.
- ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಚಿರತೆಯೊಂದು ಪತ್ತೆಯಾಗಿದ್ದು, ಸಾಮಾನ್ಯ ಚಿರತೆಗಳ ಹಾಗಿರದೆ, ಈ ಚಿರತೆಯು ಗಂಧದ ಬಣ್ಣವನ್ನು ಹೋಲುವ ಕೆಂಪು ಗುಲಾಬಿ ಮಿಶ್ರಿತ ಬಣ್ಣದ ತುಪ್ಪಳ ಮತ್ತು ಮಾಸಲು ಕಂದು ಬಣ್ಣದ ಚುಕ್ಕೆ ಹೊಂದಿದೆ. ವನ್ಯಜೀವಿ ತಜ್ಞರ ತಂಡವು, ಇದಕ್ಕೆ 'ಚಂದನ ಚಿರತೆ' ಎಂದು ಹೆಸರಿಟ್ಟಿದ್ದು, ಜಗತ್ತಿನಾದ್ಯಂತ ಈವರೆಗೆ ಕೆಲವು ಬಾರಿಯಷ್ಟೇ ಈ ಸ್ವರೂಪದ ಚಿರತೆಗಳು ಪತ್ತೆಯಾಗಿವೆ.
- ತಮ್ಮ 60ನೇ ವಯಸ್ಸಿನಲ್ಲಿ 5,000 ಕಿ.ಮೀ ಸೈಕಲ್ ಸವಾರಿ ಮಾಡಿದ ಹುಬ್ಬಳ್ಳಿ ಮೂಲದ ಚಾರ್ಟೆಡ್ ಅಕೌಂಟೆಂಟ್ ಗುರುಮೂರ್ತಿ ಮಾತರಂಗಿಮಠ ಅವರಿಗೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಗರಿ ಸಿಕ್ಕಿದೆ. ಅವರು ಮೇ 11ರಿಂದ ಆಗಸ್ಟ್ 18ರ ವರೆಗೆ ಒಟ್ಟು 5,000 ಕಿಮೀ ದೂರವನ್ನು ಪ್ರತಿ ದಿನ 50 ಕಿಮೀ ಸೈಕಲ್ ಸವಾರಿ ಮಾಡುವ ಮೂಲಕ 100 ದಿನಗಳಲ್ಲಿ ಪೂರೈಸಿದ್ದಾರೆ.
- ಕೊಪ್ಪಳ ತಾಲೂಕಿನ ಬಹದ್ದೂರ ಬಂಡಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ 24 ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಬೀರಪ್ಪ ಅಂಡಗಿ ಅವರು ತಮ್ಮ ಸ್ವಂತ ರೂ. 4 ಲಕ್ಷ ಹಣ ವೆಚ್ಚ ಮಾಡಿ, ವಿಮಾನದ ಮೂಲಕ ಬೆಂಗಳೂರಿಗೆ ಪ್ರವಾಸ ಮಾಡಿಸಿ, ತಮ್ಮ ಶಾಲಾ ಮಕ್ಕಳ ವಿಮಾನಯಾನದ ಕನಸು ನನಸು ಮಾಡಿದ್ದಾರೆ.
- ಅಮೇರಿಕಾದ ಫ್ಲೋರಿಡಾದ ಹಣಕಾಸು ಸಲಹೆಗಾರ ಮಾರಿಯೋ ಸಾಲ್ವೆಡೆ ಅವರು ಬರೋಬ್ಬರಿ 25 ವರ್ಷಗಳಿಂದ ಹಡಗುಗಳಲ್ಲಿಯೇ ವಾಸ ಮಾಡುತ್ತಿದ್ದಾರೆ. ಅವರು ತಮ್ಮ ಸಂಪೂರ್ಣ ಜೀವನವನ್ನು ಸಾಗರದ ಅತ್ಯುತ್ತಮ ನೋಟಗಳನ್ನು ವೀಕ್ಷಿಸುತ್ತ, ಕೊನೆಯಾಗದ ಪ್ರಯಾಣವನ್ನು ಒಂದು ಹಡಗಿನಿಂದ ಮತ್ತೊಂದು ಹಡಗಿಗೆ ಬದಲಿಸುತ್ತಾ ಕಾಲ ಕಳೆಯುತ್ತಿದ್ದಾರೆ.

## ಓದುಗರ ಅನಿಸಿಕೆ...




**ಯಾವ ಅರ್ಥವಿದೆ :** ದೇಶ ಆರ್ಥಿಕವಾಗಿ ವಿಶ್ವದಲ್ಲೇ ಮೂರನೇ ಸ್ಥಾನಕ್ಕೆ ಏರಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಆದರೆ, ಯುವಜನ ಉದ್ಯೋಗವಿಲ್ಲದೆ ಕುಳಿತಿದ್ದಾರೆ. ಐಟಿ–ಬಿಟಿ ವಲಯ ಕೆಲವರಿಗೆ ಮಾತ್ರ ಲಾಭದಾಯಕವಾಗಿದೆ. ಅಲ್ಲದೆ, ನಮ್ಮ ಕೃಷಿ ವಲಯದ ವೃದ್ಧಿದರ ಶೇ.2ರಿಂದ 3ರಲ್ಲೇ ನಿಂತಿದೆ. ಹೀಗಿರುವಾಗ, ಆರ್ಥಿಕವಾಗಿ ವಿಶ್ವದಲ್ಲೇ ಮೂರನೇ ಸ್ಥಾನವಿದೆ ಎಂದು ಹೇಳುವುದಕ್ಕೆ ಯಾವ ಅರ್ಥವಿದೆ.

**ವಿ.ಎನ್. ಆನಂದ ಕುಮಾರ, ಬೆಂಗಳೂರು**

**ಅಭಿನಂದಿಸೋಣ :** ದೇಶದಲ್ಲಿ ಈಗಿರುವ ಸಾಲದ ವ್ಯವಸ್ಥೆಯನ್ನು ಸುಧಾರಿಸಲು ಆರ್‌ಬಿಐ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಇದರಿಂದ ಏಪ್ರಿಲ್ 1ರ ನಂತರ ಎಲ್ಲಾ ಕ್ರೆಡಿಟ್ ಇನ್ಫಾರ್ಮೇಷನ್ ಸಂಸ್ಥೆಗಳು ಗ್ರಾಹಕರ ಕ್ರೆಡಿಟ್ ಸ್ಕೋರ್ ಅನ್ನು ಪ್ರತೀ ಏಳು ದಿನಕ್ಕೊಮ್ಮೆ ಪರಿಷ್ಕರಿಸಬೇಕಾಗುತ್ತದೆ. ಇದರಿಂದಾಗಿ ಅರ್ಹ ಗ್ರಾಹಕರಿಗೆ ಸಾಲ ಸಕಾಲದಲ್ಲಿ ಸಿಗಲಿದೆ. ಆರ್‌ಬಿಐ ಗ್ರಾಹಕ ಪರ ತೆಗೆದುಕೊಂಡ ನಿಲುವಿಗೆ ಅಭಿನಂದಿಸೋಣ.

**ಸೀತಾಪತಿ ಕೆ.ಆರ್., ಕೋಲಾರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.